# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 184 (235)

ಸದಸ್ಯರ ಹೆಸರು :ಶ್ರೀ ಕಿಶೋರ್ ಕುಮಾರ್ ಪುತ್ತೂರು,(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 18.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕರಿಮೆಣಸು (ಪೆಪ್ಪರ್) ಬೆಳೆಯುವ ಪ್ರದೇಶಗಳು ಯಾವುವು; ರಾಜ್ಯದಲ್ಲಿ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶಗಳಲ್ಲಿ ಕರಿಮೆಣಸು ಬೆಳೆಯಲಾಗುತ್ತಿದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕರಿಮೆಣಸು ಬೆಳೆಯನ್ನು ಪ್ರಮುಖವಾಗಿ ದಕ್ಷಿಣ ಕನ್ನಡ, ಉಡುಪಿ, ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು , ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಒಟ್ಟು 2.06 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.<br>ಜಿಲ್ಲಾವಾರು ವಿವರ ಅನುಬಂಧ -1 ರಲ್ಲಿ ಒದಗಿಸಿದೆ. |
| ಆ) | ಕರಿಮೆಣಸು ಬೆಳೆ ರೈತರಿಗೆ ಉತ್ತಮ ಲಾಭದಾಯಕ ಬೆಳೆಯಾಗಿದ್ದು, ಇದನ್ನು ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ; ಸದರಿ ಬೆಳೆಯನ್ನು ಬೆಳೆಯಲು ರೈತರಿಗೆ ಏನೇನು ಸೌಲಭ್ಯಗಳನ್ನು ನೀಡಲಾಗುತ್ತಿದೆ; ಪ್ರತಿ ಗಿಡಕ್ಕೆ ರೈತರಿಗೆ ಎಷ್ಟು ಪ್ರೋತ್ಸಾಹ ಧನವನ್ನು ಪ್ರಸ್ತುತ ನೀಡಲಾಗುತ್ತಿದೆ; ಈ ನಿಟ್ಟಿನಲ್ಲಿ 2026-27ನೇ ಸಾಲಿನಲ್ಲಿ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ; | ಕರಿಮೆಣಸು ಬೆಳೆಗಾರರನ್ನು ಪ್ರೋತ್ಸಾಹಿಸುವ ಸಲುವಾಗಿ ತೋಟಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ ಈ ಕೆಳಕಂಡಂತಿದೆ:<br>1. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ತೋಟಗಾರಿಕೆ ಬೆಳೆಗಳ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಕರಿಮೆಣಸು ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ. 1.00 ಲಕ್ಷಗಳ ಘಟಕ ವೆಚ್ಚ ನಿಗದಿಪಡಿಸಲಾಗಿದ್ದು, ಅದರ ಶೇ.40ರಷ್ಟು ಸಹಾಯಧನವಾಗಿ ಪ್ರತಿ ಹೆಕ್ಟೇರ್‌ಗೆ ಗರಿಷ್ಠ ರೂ. 40,000 ಗಳವರೆಗೆ ಸಹಾಯಧನ ನೀಡಲಾಗುತ್ತಿದೆ. ಫಲಾನುಭವಿಯು ಗರಿಷ್ಠ 2 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನವನ್ನು ಪಡೆಯಲು ಅವಕಾಶವಿರುತ್ತದೆ. 2026-27ನೇ ಸಾಲಿನಲ್ಲಿ ಕರಿಮೆಣಸು ಸೇರಿದಂತೆ ಇತರೆ ಬಹುವಾರ್ಷಿಕ ಸಾಂಬಾರು ಬೆಳೆಗಳ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮಕ್ಕೆ ರೂ. 266.80 ಲಕ್ಷಗಳ ಅನುದಾನವನ್ನು ನಿಗದಪಡಿಸಲಾಗಿದೆ.<br>2. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ಕಾಳುಮೆಣಸು ಒಳಗೊಂಡಂತೆ ಎಲ್ಲಾ ತೋಟಗಾರಿಕೆ ಬೆಳೆಗಳಲ್ಲಿ ಕಂಡು ಬರುವ ಕೀಟ ಮತ್ತು ರೋಗಗಳ |

| | | |
|---|---|---|
| | | ನಿರ್ವಹಣೆಗಾಗಿ ಸಾಮಾನ್ಯ ವರ್ಗದ ರೈತರಿಗೆ ಘಟಕ ವೆಚ್ಚದ ಶೇಕಡ 75% ರಂತೆ ರೂ. 7500 ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಶೇಕಡ 90% ರಂತೆ ರೂ.9000 ಗಳ ಸಹಾಯಧನವನ್ನು ಗರಿಷ್ಠ 1 ಹೆಕ್ಟೇರ್ ವರೆಗೆ ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಯಡಿ ರೂ. 135.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.<br><br>3. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಕಾಳುಮೆಣಸು ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ರೂ.5000/- ಪ್ರತಿ ಹೆಕ್ಟೇರ್ ಘಟಕ ವೆಚ್ಚದಲ್ಲಿ ಶೇ.30ರಂತೆ ಪ್ರತಿ ಹೆಕ್ಟೇರಿಗೆ ರೂ.1500/- ರಂತೆ 2 ಹೆಕ್ಟೇರ್ ರವರೆಗೆ ರೂ.3000/- ಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯಕ್ಕೆ ಒಟ್ಟು ರೂ. 400.01 ಲಕ್ಷಗಳ ಅನುದಾನ ನಿಗದಿಪಡಿಸಿಲಾಗಿದ್ದು ಕಾರ್ಯಕ್ರಮ ಅನುಷ್ಠಾನ ಗೊಳಿಸಲಾಗುತ್ತಿದೆ.<br><br>4. ಕೃಷಿ ಯಾಂತ್ರೀಕರಣ ಯೋಜನೆಯಡಿ (SMAM) ಕಾಳುಮೆಣಸು ಒಳಗೊಂಡಂತೆ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಕಟಾವು ಹಾಗೂ ಸಿಂಪರಣೆಗಾಗಿ ದೋಟಿ ಖರೀದಿಸಲು, ಕರಿಮೆಣಸು ಒಣಗಿಸುವ ಹಾಗೂ ಸಿಪ್ಪೆ ಸುಲಿಯುವ ಯಂತ್ರಗಳನ್ನು ಖರೀದಿಸಲು ಸಾಮಾನ್ಯ ವರ್ಗದವರಿಗೆ ಶೇ.40 ರಷ್ಟು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಶೇ.50 ರಂತೆ ಸಹಾಯಧನ ನೀಡಲಾಗುತ್ತಿದೆ.<br><br>5. ವಿಕಸಿತ ಭಾರತ್-ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಅಜೀವಿಕಾ ಮಿಷನ್ ಗ್ರಾಮೀಣ(ವಿಬಿ-ಜಿ ರಾಮ್ ಜಿ) ಯೋಜನೆಯಡಿ ತೋಟಗಾರಿಕೆ ಕಾಮಗಾರಿಗಳಲ್ಲಿ ಕಾಳುಮೆಣಸು ಬೆಳೆಯ ಪ್ರದೇಶ ವಿಸ್ತರಣೆಯನ್ನು ಕೈಗೊಳ್ಳಲು ಅವಕಾಶವಿರುತ್ತದೆ. ಕಾಳುಮೆಣಸು ಬೆಳೆಯನ್ನು ಯೋಜನೆಯಡಿ 1 ಹೆಕ್ಟೇರ್ ಪ್ರದೇಶ ವಿಸ್ತರಣೆಗೆ ಭರಿಸಬಹುದಾದ ವೆಚ್ಚದ ವಿವರ ಈ ಮುಂದಿನಂತಿದೆ. |

<table>
<tr>
<td></td>
<td></td>
<td>
<table>
<tr><th>ಕ್ರ ಸಂ</th><th>ಬೆಳೆ</th><th>ಮೊತ್ತ. (ರೂ.ಗಳಲ್ಲಿ)</th></tr>
<tr><td>1</td><td>ಕರಿಮೆಣಸು (ಅಡಕೆಯಲ್ಲಿ ಮಿಶ್ರ ಬೆಳೆ)</td><td>1,17,975</td></tr>
<tr><td>2</td><td>ಕರಿಮೆಣಸು (ತೆಂಗಿನಕಾಯಿಯಲ್ಲಿ ಮಿಶ್ರ ಬೆಳೆ)</td><td>18,265</td></tr>
<tr><td>3</td><td>ಕರಿಮೆಣಸು (ಕಾಫಿಯಲ್ಲಿ ಮಿಶ್ರ ಬೆಳೆ)</td><td>25,705</td></tr>
<tr><td>4</td><td>ಕರಿಮೆಣಸು (ರೋಬಸ್ಟಾ ಕಾಫಿಯಲ್ಲಿ ಮಿಶ್ರ ಬೆಳೆ)</td><td>31,776</td></tr>
<tr><td>5</td><td>ಕರಿಮೆಣಸು (ಅರೇಬಿಕಾ ಕಾಫಿಯಲ್ಲಿ ಮಿಶ್ರ ಬೆಳೆ)</td><td>55,151</td></tr>
</table>
6. ಹನಿ ನೀರಾವರಿ ಯೋಜನೆಯಡಿ 2 ಹೆಕ್ಟೇರ್ ಪ್ರದೇಶದ ವರೆಗೆ ಘಟಕ ವೆಚ್ಚದ ಶೇ. 90 ರಂತೆ ಹಾಗೂ 2 ಹೆಕ್ಟೇರ್ ನಂತರ 5 ಹೆಕ್ಟೇರ್ ವರೆಗೆ ಘಟಕ ವೆಚ್ಚದ ಶೇ. 45 ರಂತೆ ಸಹಾಯಧನವನ್ನು ನೀಡಲಾಗುತ್ತಿದೆ.
</td>
</tr>
<tr>
<td>ಇ)</td>
<td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಂದಾಜು 3000 ಹೆಕ್ಟೇರ್‌ಗೂ ಅಧಿಕ ಜಾಗದಲ್ಲಿ ಕರಿಮೆಣಸು ಬೆಳೆಯಲಾಗುತ್ತಿದ್ದು ಕಳೆದ 3 ವರ್ಷಗಳಲ್ಲಿ ಸದರಿ ಜಿಲ್ಲೆಗಳ ರೈತರಿಗೆ ಎಷ್ಟು ಪ್ರೋತ್ಸಾಹ ಧನ ನೀಡಲಾಗಿದೆ: (ತಾಲ್ಲೂಕುವಾರು ವಿವರ ನೀಡುವುದು)</td>
<td>ಕಳೆದ ಮೂರು ವರ್ಷಗಳಲ್ಲಿ ಎಂದರೆ 2023-24, 2024-25 ಮತ್ತು 2025-26ನೇ ಸಾಲಿನ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ.56.40 ಲಕ್ಷಗಳು ಮತ್ತು ಉಡುಪಿ ಜಿಲ್ಲೆಗೆ ರೂ.61.96 ಲಕ್ಷಗಳ ಪ್ರೋತ್ಸಾಹಧನ ನೀಡಲಾಗಿದೆ. ತಾಲ್ಲೂಕುವಾರು ವಿವರವನ್ನು ಅನುಬಂಧ-2 ರಲ್ಲಿ ಒದಗಿಸಿದೆ.</td>
</tr>
<tr>
<td>ಈ)</td>
<td>ಕಾಸರಗೋಡು ಸಿ.ಪಿ.ಸಿ.ಆರ್.ಐ, ಸಂಶೋಧನಾ ಕೇಂದ್ರದಲ್ಲಿ ಅಭಿವೃದ್ಧಿ ಪಡಿಸಿರುವ ಕರಿಮೆಣಸಿನ ವಿಶೇಷ ತಳಿಗಳನ್ನು (ಚಂದ್ರ, ಕುಂಭಕ್ಕಲ್. ಕಸಿ) ರಾಜ್ಯದ ರೈತರಿಗೆ ನೀಡಲಾಗಿದೆಯೇ: ನೀಡಿದ್ದರೆ ಎಷ್ಟು ರೈತರಿಗೆ ನೀಡಲಾಗಿದೆ: (ಜಿಲ್ಲಾವಾರು ವಿವರ ನೀಡುವುದು)</td>
<td>ಕಾಸರಗೋಡು ಸಿ.ಪಿ.ಸಿ.ಆರ್.ಐ. ಸಂಶೋಧನಾ ಕೇಂದ್ರದಿಂದ ಕರಿಮೆಣಸು ವಿಶೇಷ ತಳಿಗಳನ್ನು (ಚಂದ್ರ, ಕುಂಭಕ್ಕಲ್, ಕಸಿ) ರಾಜ್ಯದ ರೈತರಿಗೆ ನೀಡಿರುವುದಿಲ್ಲ.</td>
</tr>
</table>

| | | |
|---|---|---|
| ಉ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಡಿಕೆ, ಕಾಫೀ, ತೆಂಗು ಬೆಳೆಗಳಲ್ಲಿ ಮಿಶ್ರ ಬೆಳೆಯಾಗಿ ಹೆಚ್ಚಾಗಿ ಕರಿಮೆಣಸು ಬೆಳೆಯಲು ರೈತರನ್ನು ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರ ವಿಶೇಷ ಯೋಜನೆಗಳನ್ನು ರೂಪಿಸಿದೆಯೇ? (ವಿವರ ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಡಿಕೆ, ಕಾಫೀ, ತೆಂಗು ಬೆಳೆಗಳಲ್ಲಿ ಮಿಶ್ರ ಬೆಳೆಯಾಗಿ ಹೆಚ್ಚಾಗಿ ಕರಿಮೆಣಸು ಬೆಳೆಯಲು ರೈತರನ್ನು ಪ್ರೋತ್ಸಾಹಿಸುವ ಸಲುವಾಗಿ ವಿಶೇಷ ಯೋಜನೆಗಳನ್ನು ರೂಪಿಸಿರುವುದಿಲ್ಲ.<br>ಉತ್ತರ(ಆ)ನಲ್ಲಿ ವಿವರಿಸಿರುವಂತೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. |

ಸಂಖ್ಯೆ: HORTI 430 HGM 2026

P.S. [signature]

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

| ಅನುಬಂಧ-1 | | |
|---|---|---|
| ಕರಿಮೆಣಸು ಬೆಳೆಯ ಪ್ರಮುಖ ಜಿಲ್ಲೆಗಳ ವಿಸ್ತೀರ್ಣದ ವಿವರ | | |
| ಕ್ರಮ ಸಂಖ್ಯೆ | ಜಿಲ್ಲೆಗಳು | ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ ) |
| 1 | ಚಿಕ್ಕಮಗಳೂರು | 63056 |
| 2 | ಕೊಡಗು | 59942 |
| 4 | ದಕ್ಷಿಣ ಕನ್ನಡ | 38011 |
| 5 | ಹಾಸನ | 30005 |
| 6 | ಶಿವಮೊಗ್ಗ | 7781 |
| 7 | ಉತ್ತರ ಕನ್ನಡ | 5737 |
| 9 | ಉಡುಪಿ | 1115 |
| 13 | ಇತರೆ ಜಿಲ್ಲೆಗಳು | 471 |
| | ಒಟ್ಟು | 206119 |

ತೋಟಗಾರಿಕೆ ಅಪರ ನಿರ್ದೇಶಕರು
ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ

## ಅನುಬಂಧ-2

**ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಕಾಳುಮೆಣಸಿನ ಬೆಳೆಗೆ ಸಹಾಯಧನ ನೀಡಲಾಗಿರುವ ತಾಲ್ಲೂಕುವಾರು ವಿವರ.**
**(ಭೌತಿಕ -ಹೆಕ್ಟೇರ್, ಆರ್ಥಿಕ- ರೂ. ಲಕ್ಷಗಳಲ್ಲಿ)**

| ಕ್ರ. ಸಂ | ಜಿಲ್ಲೆ ಗಳು | ತಾಲ್ಲೂಕುಗಳು | 2023-24 | | 2024-25 | | 2025-26 | | ಒಟ್ಟು | |
|---|---|---|---|---|---|---|---|---|---|---|
| | | | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಭೌತಿಕ ಸಾಧನೆ | ಆರ್ಥಿಕ ಸಾಧನೆ |
| 1 | ದಕ್ಷಿಣ ಕನ್ನಡ | ಮಂಗಳೂರು | 23.84 | 4.77 | 6.24 | 1.50 | 20.67 | 4.96 | 50.75 | 11.23 |
| 2 | | ಬಂಟ್ವಾಳ | 7.81 | 1.87 | 23.75 | 5.70 | 20.88 | 5.01 | 52.43 | 12.58 |
| 3 | | ಸುಳ್ಯ | 30.63 | 7.35 | 5.83 | 1.40 | 17.39 | 4.17 | 53.85 | 12.92 |
| 4 | | ಪುತ್ತೂರು | 6.50 | 1.56 | 17.53 | 4.21 | 13.88 | 3.33 | 37.91 | 9.10 |
| 5 | | ಬೆಳ್ತಂಗಡಿ | 9.24 | 2.22 | 9.82 | 2.36 | 24.98 | 6.00 | 44.05 | 10.57 |
| | | **ಒಟ್ಟು** | **78.03** | **17.77** | **63.18** | **15.16** | **97.79** | **23.47** | **238.99** | **56.40** |
| 6 | ಉಡುಪಿ | ಉಡುಪಿ | 5.15 | 1.03 | 7.40 | 1.48 | 16.92 | 13.42 | 29.47 | 15.93 |
| 7 | | ಕುಂದಾಪುರ | 12.88 | 2.58 | 3.60 | 0.72 | 40.22 | 19.03 | 56.70 | 22.32 |
| 8 | | ಕಾರ್ಕಳ | 11.60 | 2.32 | 17.10 | 3.42 | 35.82 | 17.96 | 64.52 | 23.70 |
| | | **ಒಟ್ಟು** | **29.63** | **5.93** | **28.10** | **5.62** | **92.96** | **50.41** | **150.69** | **61.96** |
| | | **ಒಟ್ಟು** | **107.66** | **23.70** | **91.28** | **20.78** | **190.75** | **73.88** | **389.68** | **118.36** |

**ತೋಟಗಾರಿಕೆ ಅಪರ ನಿರ್ದೇಶಕರು**
**ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ**